**ಪುಟ್ಟು:** ಅಮ್ಮ, ಪಕ್ಕದ ಮನೆ ಆಂಟಿ ಹೆಸರೇನು?
**ಅಮ್ಮ:** ಯಾಕೆ ಹೀಗೆ ಕೇಳ್ತಾ ಇದ್ದೀಯಲ್ಲ, ಅವರ ಹೆಸರು ಲಲಿತಾ ಅಂತ.
**ಪುಟ್ಟು:** ಮತ್ತೆ ಅಪ್ಪ ಅವರನ್ನು ಚಿನ್ನ ರನ್ನ ಡಾರ್ಲಿಂಗ್ ಅಂತ ಕರೀತಾರಲ್ಲ.


**ರವಿ:** ಮಹೇಶ, ಆ ನಳಿನಿಯನ್ನು ಸೋಮಪ್ಪ ಮತ್ತು ಭೀಮಪ್ಪ ಮದುವೆಯಾಗಲು ಪ್ರಯತ್ನಿಸುತ್ತಿದ್ದರಲ್ಲ, ಅವರಲ್ಲಿ ಯಾರಿಗೆ ಅದೃಷ್ಟ ಒಲಿಯಿತು?
**ಮಹೇಶ:** ಸೋಮಪ್ಪನಿಗೆ.
**ರವಿ:** ಆಕೆಯನ್ನು ಮದುವೆ ಮಾಡಿಕೊಂಡನೆ?
ಮಹೇಶ: ಇಲ್ಲ, ಆಕೆಯನ್ನು ಅವನು ಮದುವೆ ಮಾಡಿಕೊಳ್ಳಲಿಲ್ಲ.

**ಕವಿತಾ ವಾಚಕ:** ಗೋಷ್ಠಿಯಲ್ಲಿ ನನ್ನ ಕವನಗಳನ್ನು ಮೊದಲಿನಿಂದಲೂ ಶ್ರದ್ಧೆಯಿಂದ ಕೇಳಿದವರು ನೀವೊಬ್ಬರೇ, ನಿಮಗೆ ಧನ್ಯವಾದ.
**ಆತ:** ಏನು ಹೇಳುತ್ತಾ ಇದ್ದೀರಿ? ನನಗೇನೂ ಕೇಳಿಸ್ತಾ ಇಲ್ಲ.

***

**ಪದ್ಮ:** ಸರೋಜಾ, ನನ್ನವರಿಗೆ ನನ್ನ ಕಂಡ್ರೆ ಎಷ್ಟು ಪ್ರೀತಿ ಅಂದ್ರೆ, ದಿನ ಮಲ್ಲಿಗೆ ಹೂ ತರೋದನ್ನಂತೂ ಮರೆಯೋದಿಲ್ಲ.
**ಸರೋಜಾ:** ಅಯ್ಯೋ ಪೆದ್ದಿ, ಅದು ನಿನ್ನ ಮೇಲಿನ ಪ್ರೀತಿಯಿಂದಲ್ಲ ಹೂವು ಮಾರುವವಳ ಮೇಲಿನ ಪ್ರೀತಿಯಿಂದ.

**ಇನ್ನೇಲೆ ನಾನು "ಸೈಲೆಂಟ್"...ಬೇರೆಯವರು "ವೈಲೆಂಟ್" ಎಂದ ಬಸನಗೌಡ ಯತ್ನಾಳ್...!!**




**ರಂಗ:** ನಾಣಿ ನೀನು ಇಸ್ಪೀಟು ಆಡುವಾಗ ಯಾವಾಗಲೂ ಗೆಲ್ಲುತ್ತೀಯ. ಆದರೆ ಕುದುರೆ ರೇಸಿನಲ್ಲಿ ಯಾವಾಗಲೂ ಸೋಲುವೆಯಲ್ಲ. ಇದಕ್ಕೆ ಕಾರಣವೇನು?
**ನಾಣಿ:** ಹೌದು, ಮನುಷ್ಯರನ್ನು ವಂಚಿಸಿದಂತೆ ಕುದುರೆಗಳನ್ನು ವಂಚಿಸುವುದಕ್ಕೆ ಆಗುವುದಿಲ್ಲವಲ್ಲ.

**ಪತ್ರಕರ್ತ:** ನೀವು ಇಷ್ಟು ವರ್ಷಗಳು ಆರೋಗ್ಯವಾಗಿರಲು ಸರಿಯಾದ ಕಾರಣ ಹೇಳುತ್ತೀರಾ?
**ಆತ:** ಮೆಲ್ಲಗೆ ಮಾತಾಡಿ, ಈಗಾಗಲೇ ಎರಡು ಬಿಸ್ಕೆಟ್ ಕಂಪನಿಗಳು ನನ್ನ ಬಳಿ ಬಂದಿವೆ. ಅವುಗಳಲ್ಲಿ ಯಾವುದು ಹೆಚ್ಚು ಹಣ ಕೊಡುತ್ತದೆ ಅದೇ ನನ್ನ ಆರೋಗ್ಯದ ಗುಟ್ಟಾಗುವುದು.

**ಸಂಸದರ ಆಸನದಲ್ಲಿ ಕಂತೆ ಕಂತೆ ಹಣ ಪತ್ತೆ..!!**




**ನಳಿನಿ:** ಲಲಿತಾ, ನಮ್ಮ ಗೆಳತಿ ನಿರ್ಮಲಾಳ ಬಗ್ಗೆ ಕೆಲವು ವಿಷಯಗಳನ್ನ ಹೇಳುವುದಿತ್ತು. ಆದರೆ ನನಗೆ ಬೇರೆ ಗಂಟಲು ನೋವು.
**ಲಲಿತಾ:** ಒಳಗೆ ಬಾ ನಳಿನಿ, ಸ್ವಲ್ಪ ಕಷಾಯ ಮಾಡಿಕೊಡುತ್ತೇನೆ. ಅದನ್ನು ಕುಡಿದ ಮೇಲೆ ಆದಷ್ಟು ಬೇಗ ಗಂಟಲು ಸರಿಹೋಗುತ್ತೆ. ಆಮೇಲೆ ವಿಷಯ ಹೇಳಬಹುದು.

**ಆತ:** ನೀವು ದೂರದರ್ಶನದ ಕಲಾವಿದರೇ?
**ಈತ:** ಹೌದು, ನನ್ನನ್ನು ಯಾವ ಕಾರ್ಯಕ್ರಮದಲ್ಲಿ ನೋಡಿದ್ದೀರಿ?
**ಆತ:** ಅದೇ ಕ್ರೈಂ ಡೈರಿಯಲ್ಲಿ ನೋಡಿದ್ದೆ.

**ಆಕೆ:** ಸಾರ್, ಈ ಸುಂದರವಲ್ಲದ ಚಿತ್ರವೂ ತಮ್ಮ ಕಲೆಯ ನಮೂನೆಯೇ?
**ಕಲಾವಿದ:** ಮೇಡಂ, ತಾವು ನೋಡುತ್ತಾ ಇರೋದು ಕನ್ನಡಿಯನ್ನು.

**ಮೂರ್ತಿ:** ಕೇಶವ, ಸಂಗೀತವೆಂದರೆ ಅದೊಂದು ಶಕ್ತಿ. ಅದರಿಂದ ಮನಸ್ಸು ಪ್ರಶಾಂತವಾಗುತ್ತದೆ ಅಲ್ಲವೆ?
**ಕೇಶವ:** ಹೌದು, ನನ್ನ ಹೆಂಡತಿಯ ಸಂಗೀತ ಕೇಳಿದ ಮೇಲೆ ನನಗೆ ಸ್ತ್ರೀ ವ್ಯಾಮೋಹವೇ ಬಿಟ್ಟು ಹೋಯಿತು.

**ರಾಮು:** ನಾಣಿ ನಿನ್ನ ಹೆಂಡತಿ ಹಾಗೂ ನಿನ್ನ ನಾದಿನಿ ಒಂದೇ ತರಹ ಇದ್ದಾರಲ್ಲ ಹೇಗೆ ಕಂಡುಹಿಡಿಯುತ್ತೀಯಾ?
**ನಾಣಿ:** ಬಹಳ ಸುಲಭ, ನಾನು ನೋಡಿದಾಗ ನಕ್ಕರೆ ಅವಳು ನಾದಿನಿ. ನನ್ನನ್ನೇ ದುರುಗುಟ್ಟಿ ನೋಡಿದರೆ ಆಕೆಯೇ ನನ್ನ ಹೆಂಡತಿ.

**ಕಿಟ್ಟು:** ರವಿ ಈ ಸಾರಿ ದೀಪಾವಳಿಯಲ್ಲಿ ಬಿಟ್ಟ ರಾಕೆಟ್ ಚಂದ್ರನನ್ನು ತಾಗಿತು.
**ರವಿ:** ಅದೇನೋ ಸರಿ, ಆದರೆ ನಿನ್ನ ಕೆನ್ನೆ ಊದಿಕೊಂಡಿರೋದು ಯಾಕೆ?
**ಕಿಟ್ಟು:** ಚಂದ್ರನ ಅಮ್ಮ ಬಂದು ನನ್ನ ಕೆನ್ನೆಗೆ ಒಂದು ಬಾರಿಸಿದರು.

**ಪತ್ನಿ:** ಏನ್ರೀ, ಯಾವಾಗಲೂ ನಮ್ಮ ಮಗನನ್ನು, 'ನೀನು ಹೀಗೇ ಇದ್ರೆ, ಇಲ್ಲಿಯೇ ನರಕ ಕಾಣ್ತೆಯಾ' ಅಂತಿಂದ್ರಲ್ವಾ, ಈಗ ನೋಡಿ ಅವನು ಸ್ವರ್ಗದಲ್ಲಿ ಇದ್ದಾನೆ.
**ಪತಿ:** ಇದೇನೇ ಹೀಗೆ ಹೇಳ್ತಾ ಇದ್ದೀಯಾ?
**ಪತ್ನಿ:** ಹೌದು ಕಣ್ರೀ, ಈಗ ನಮ್ಮ ಮಗನನ್ನು ಬಿಗ್‌ಬಾಸ್ ಮನೆಯ ಸ್ವರ್ಗದಲ್ಲಿರಿಸಿದ್ದಾರೆ.

**ಆತ:** ಸಾರ್ ಈ ತಿರುವು ತುಂಬ ಅಪಘಾತ ಸ್ಥಳವಾದರೂ ಇಲ್ಲಿ ಎಚ್ಚರಿಕೆಯ ಬೋರ್ಡನ್ನು ಹಾಕಿಲ್ಲವಲ್ಲ?
**ಅಧಿಕಾರಿ:** ಹಾಕಿದ್ದೆವು ಈ ಐದು ವರ್ಷದಲ್ಲಿ ಒಂದು ಅಪಘಾತ ಆಗಿಲ್ಲ. ಅದಕ್ಕೆ ಬೋರ್ಡ್ ತೆಗೆಸಿದೆವು.

–ಶಂಕರೇಗೌಡ ತುಂಬಕೆರೆ, ಮಂಡ್ಯ